ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 15.11.2024

**ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿ ಪರ ವಕೀಲರಿಂದ.**

2 ರಿಂದ 5 ನೇ ಪ್ರತಿವಾದಿಯರು ತಿರುಕಪ್ಪನ ಘರಾಣೇದ ಸದಸ್ಯರು ಅಲ್ಲಾ ಎಂದರೆ ಸರಿಯಲ್ಲ. ರೇಣುಕವ್ವ ಮತ್ತು ಪಾರ್ವತೆವ್ವ ಅವರ ತಂದೆ ಜೀವಂತವಿದ್ದಾಗ ಯಾವುದೇ ಪಾಲು ವಗೈರೆ ಕೇಳಿ ದಾವೆ ಮಾಡಿಲ್ಲ ಎಂದರೆ ಸರಿಯಲ್ಲ. 2 ರಿಂದ 5 ನೇ ಪ್ರತಿವಾದಿಯವರನ್ನು ಈ ದಾವೆಯಲ್ಲಿ ವಿನಾಃಕಾರಣ ತಪ್ಪಾಗಿ ಪ್ರತಿವಾದಿ ಅಂತಾ ಸೇರಿಸಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿ ಯ಼ಾರಿಂದ ಯಾರಿಗೆ ಬಂದವು ಅಂತಾ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಅಂತಾ ತೋರಿಸಲು ಪಹಣಿ ಪತ್ರಿಕೆ ಮತ್ತು ಪಂಚಾಯತ್ ಕರ ಆಕರಣೆ ಬಿಟ್ಟು ಬೇರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಜೀವನಕ್ಕೆ ಜಮೀನನ್ನು ಕೊಟ್ಟಿದ್ದರೂ ಸಹಿತ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಜಮೀನಿನನಲ್ಲಿ ಬೋರ ವೇಲಗಳನ್ನು 1 ನೇ ಪ್ರತಿವಾದಿ ಹಾಕಿಸಿದ್ದಾನೆಂದರೆ ಸರಿಯಲ್ಲ. ನನ್ನ ಗಂಡ ಬೋರವೆಲ ಹಾಕಿದ್ದಾನೆಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಪಂಚಾಯತ್ ಆಸ್ತಿಗಳಿಗೆ ಚೆಕ್ಕಬಂದಿಯನ್ನು ಬರೆಯಿಸಿರುತ್ತೇನೆ. ನನ್ನ ದಾವೆಯಲ್ಲಿ ಆಸ್ತಿ ವಿವರಣೆ ಅಪೂರ್ಣವಿದೆ ಎಂದರೆ ಸರಿಯಲ್ಲ. ದಾವಾ ದಾಖಲು ಮಾಡಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.